**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–08)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು 2025ರ ಏಪ್ರಿಲ್, ಮೊದಲನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ.-**ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ರ ಅನುಸೂಚಿಯಲ್ಲಿನ ಕ್ರಮ ಸಂಖ್ಯೆ 1ರಲ್ಲಿ, (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ತಿಂಗಳಿಗೆ ರೂ.200-00 (ಫೆಬ್ರುವರಿ ತಿಂಗಳನ್ನು ಹೊರತುಪಡಿಸಿ)

(ii) ಫೆಬ್ರುವರಿ ತಿಂಗಳಿಗೆ ರೂ.300-00".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸಿದಾಗ ಲಗತ್ತಿಸಿದಂತೆ)

ತಿಂಗಳಿಗೆ ರೂ. 25,000 ಮತ್ತು ಅದಕ್ಕಿಂತ ಹೆಚ್ಚಿನ ಸಂಬಳ ಅಥವಾ ಮಜೂರಿ ಅಥವಾ ಸಂದರ್ಭಾನುಸಾರವಾಗಿ ಅವೆರಡನ್ನೂ ಪಡೆಯುವ ಸಂಬಳ ಅಥವಾ ಮಜೂರಿದಾರರಿಗೆ ವಾರ್ಷಿಕವಾಗಿ ರೂ. 2400 ರಿಂದ ರೂ. 2500ರವರೆಗೆ ವೃತ್ತಿ ತೆರಿಗೆ ದರವನ್ನು ಹೆಚ್ಚಿಸಲು ಮತ್ತು 2025-26ನೇ ವರ್ಷದ ಆಯವ್ಯಯ ಭಾಷಣದ 476ನೇ ಖಂಡಿಕೆಯಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ, 1976ರ 35)ರ ಉದ್ಧೃತ ಭಾಗ

**XX XX XX**

**ಅನುಸೂಚಿ**

**(3 (2) ಪ್ರಕರಣವನ್ನು ನೋಡಿ)**

| ಕ್ರ. ಸಂ. | ವ್ಯಕ್ತಿಗಳ ವರ್ಗ | ತೆರಿಗೆಯ ದರ |
|---|---|---|
| (1) | (2) | (3) |
| 1 | ಒಂದು ತಿಂಗಳಿಗೆ ರೂ. 25,000-00 ಮತ್ತು ಹೆಚ್ಚಿನ ಸಂದರ್ಭಾನುಸಾರವಾಗಿ, ಸಂಬಳ ಅಥವಾ ಮಜೂರಿಯನ್ನು ಅಥವಾ ಇವೆರಡನ್ನೂ ಪಡೆಯವ ವ್ಯಕ್ತಿಗಳು | ರೂ.200 ಪ್ರತಿ ತಿಂಗಳು |

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 18ನೇ ಮಾರ್ಚ್ 2025

**KARNATAKA LEGISLATIVE COUNCIL**
**ONE HUNDRED AND FIFTY FIFTH SESSION**

# THE KARNATAKA TAX ON PROFESSION, TRADES, CALLINGS AND EMPLOYMENTS (AMENDMENT) BILL, 2025

**(LA Bill No. 08 of 2025)**
**(As passed by the Karnataka Legislative Assembly)**

A Bill further to amend the Karnataka Tax on Profession, Trades, Callings and Employments Act, 1976.

Whereas it is expedient to amend the Karnataka Tax on Profession, Trades, Callings and Employments Act, 1976 (Karnataka Act 35 of 1976), for the purpose hereinafter appearing;

Be it enacted by Karnataka State Legislature in the Seventy-sixth year of the Republic of India as follows.-

**1. Short title and commencement.-** (1) This Act may be called the Karnataka Tax on Profession, Trades, Callings and Employments (Amendment) Act, 2025.

(2) It shall come into force with effect from the first day of April, 2025.

**2. Amendment of the Schedule.-** In the Karnataka Tax on Profession, Trades, Callings and Employments Act, 1976 (Karnataka Act 35 of 1976), in the schedule, in serial number 1, for the entries relating to the column number (3),the following shall be substituted, namely:-

"(i) Rs.200-00 per month (except for the month of February);

(ii) Rs.300-00 for the month of February".

## STATEMENT OF OBJECTS AND REASONS

**(As appended to at the time of Introduction)**

It is considered necessary further to amend the Karnataka Tax on Profession, Trades, Callings and Employments Act, 1976 (Karnataka Act 35 of 1976) to give effect to the proposals made in the para 476 of Budget Speech for the year 2025-2026 and to increase rate of tax from rupees 2400 to rupees 2500 per annum on salary or wage earners whose salary or wage or both, as the case may be, for a month is rupees 25,000 and above.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SIDDARAMAIAH**
Chief Minister and
Minister for Finance

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE KARNATAKA TAX ON PROFESSION, TRADES, CALLINGS AND EMPLOYMENTS ACT, 1976 (KARNATAKA ACT 35 OF 1976)

**XXX XXX XXX**

## SCHEDULE

**[See section 3(2)]**

**Rates of tax on professions, trades, callings and employments**

| Sl. No. | Class of Persons | Rate of tax |
|---|---|---|
| (1) | (2) | (3) |
| 1 | Salary or wage earners whose salary or wage or both, as the case may be, for a month is Rs. 25,000-00 and above | Rs. 200-00 per month |

**XXX XXX XXX**

Govt. Press, Vikasa Soudha, Bengalur, 18th Mar, 2025, P7, W.D. , Copies 300